Sri **SAIRAM**
**COLLEGE OF ENGINEERING**
Anekal, Bengaluru

# ವಿಜಯವಾಣಿ
ಕನ್ನಡಿಗರ ಧ್ವನಿ

**Date: 03.02.2018** **Edition: Bengaluru (Gramanthara)**

## Newspaper - Vijayavani

# ನ್ಯೂ ಇಂಡಿಯಾ ವಿದ್ಯಾರ್ಥಿ ಲರ್ನಥಾನ್
## 24 ಗಂಟೆಗಳ ಸ್ವಯಂ ಕಲಿಕೆ ಸವಾಲು ಕಾರ್ಯಕ್ರಮ




ಗುಡ್ಡನಹಳ್ಳಿ ಸಮೀಪದ ಶ್ರೀ ಸಾಯಿರಾಂ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶುಕ್ರವಾರ ನ್ಯೂ ಇಂಡಿಯಾ ವಿದ್ಯಾರ್ಥಿ ಚಾಂಪಿಯನ್‌ಶಿಪ್ ಲರ್ನಥಾನ್-2018ಗೆ ಗಣ್ಯರು ಚಾಲನೆ ನೀಡಿದರು.

■ ವಿಜಯವಾಣಿ ಸುದ್ದಿಜಾಲ ಆನೇಕಲ್

ಗುಡ್ಡನಹಳ್ಳಿ ಸಮೀಪದ ಶ್ರೀ ಸಾಯಿರಾಂ ಇಂಜಿನಿಯರಿಂಗ್ ಕಾಲೇಜಿನಲ್ಲಿ ಗಣಕಯಂತ್ರ ವಿಭಾಗದಿಂದ ಶುಕ್ರವಾರ ಆರಂಭವಾದ ನ್ಯೂ ಇಂಡಿಯಾ ವಿದ್ಯಾರ್ಥಿ ಚಾಂಪಿಯನ್‌ಶಿಪ್ ಲರ್ನಥಾನ್-2018 ಶನಿವಾರವೂ ನಡೆಯಲಿದೆ.

ಐಸಿಟಿ ಅಕಾಡೆಮಿ ಮತ್ತು ಸೇಲ್ಸ್ ಫೋರ್ಸ್ (ಟ್ರೇಲ್ ಹೆಡ್) ಸಹಯೋಗದಲ್ಲಿ ಫೆ.2 ಶುಕ್ರವಾರ ಮಧ್ಯಾಹ್ನ 12 ರಿಂದ ಫೆ.3ರ ಮಧ್ಯಾಹ್ನ 12ರವರೆಗೆ 24 ಗಂಟೆಗಳ ಸ್ವಯಂ ಕಲಿಕೆ ಸವಾಲು ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೀ ಸಾಯಿರಾಂ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನ 104 ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ. ದೇಶದಲ್ಲಿ ಒಟ್ಟು 100 ಇಂಜಿನಿಯರಿಂಗ್ ಕಾಲೇಜಿನಲ್ಲಿ ಲರ್ನಥಾನ್ ಆಯೋಜಿಸಲಾಗಿದೆ.

ಐಸಿಟಿ ಅಕಾಡೆಮಿ ಪ್ರಾದೇಶಿಕ ಮುಖ್ಯಸ್ಥ ಸುರೇಶ್‌ಬಾಬು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಕೌಶಲ ಅಭಿವೃದ್ಧಿಪಡಿಸಲು, ವೃತ್ತಿ ಆಯ್ಕೆಗಳನ್ನು ಅನ್ವೇಷಿಸಲು ಲರ್ನಥಾನ್ ಸಹಕಾರಿಯಾಗುತ್ತದೆ ಎಂದು ಹೇಳಿದರು.

ವಿದ್ಯಾರ್ಥಿಗಳ ಕೌಶಲ ಹೆಚ್ಚಿಸಲು ಇಂತಹ ಕಾರ್ಯಕ್ರಮಗಳು ಅಗತ್ಯ. ನಮ್ಮ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಕಲಿಕೆಯ ಭಾಗವಾಗಿರುವುದು ಸಂತಸ ತಂದಿದೆ ಎಂದು ಪ್ರಾಂಶುಪಾಲ ಡಾ.ವೈ. ವಿಜಯ ಕುಮಾರ್ ತಿಳಿಸಿದರು.

ಕಾಲೇಜು ಆಡಳಿತ ಪ್ರತಿನಿಧಿ ಡಾ.ಆರ್.ಅರುಣ್ ಕುಮಾರ್, ಟ್ರಸ್ಟಿ ಕೆ.ಪಟೇಲ್, ಐಸಿಟಿ ಅಕಾಡೆಮಿ ವ್ಯವಸ್ಥಾಪಕ ಆರ್. ನಾಗರಾಜನ್, ಉಪ ಪ್ರಾಂಶುಪಾಲ ಡಾ.ಬಿ.ಷಡಕ್ಷರಪ್ಪ, ಉಪಾಧ್ಯಾಯಿನಿ ಅರ್ಪಿತಾ ವಾಸುದೇವ್ ಮತ್ತಿತರರು ಇದ್ದರು.

**Page No.5**

MJF.LN. LEO MUTHU
Founder Chairman - Sairam Institutions

Sairam INSTITUTIONS

Sri SAIRAM
COLLEGE OF ENGINEERING
Anekal, Bengaluru

ಕನ್ನಡಪ್ರಭ
ನೇರ. ದಿಟ್ಟ. ನಿರಂತರ

**Date: 04.02.2018** **Edition: Bengaluru**

## Newspaper - Kannada Prabha

ಕನ್ನಡಪ್ರಭ

### ಸಾಯಿರಾಂ ಕಾಲೇಜಿನಲ್ಲಿ ಶೈಕ್ಷಣಿಕ ಲರ್ನಥಾನ್

**ಆನೇಕಲ್:** ದೇಶದಲ್ಲೇ ಅಪರೂಪವಾದ ಶೈಕ್ಷಣಿಕ ಲರ್ನಥಾನ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ವಿದ್ಯಾರ್ಥಿಗಳಿಗೆ ವಿಶೇಷವಾದ ಅವಕಾಶವಾಗಿದೆ. ಹೊಸ ಪೀಳಿಗೆಯ ಉದ್ಯೋಗಗಳಿಗೆ ಬೇಕಾದ ಉದ್ಯೋಗ ಕೌಶಲ್ಯ, ತರಬೇತಿ ಹಾಗೂ ಅವಕಾಶಗಳನ್ನು ದಕ್ಕಿಸಿಕೊಳ್ಳುವ ಬೃಹತ್ ವೇದಿಕೆಯಾಗಿದ್ದು, ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದು ಐಸಿಟಿ ಅಕಾಡೆಮಿ ಮುಖ್ಯಸ್ಥ ಎಲ್ ಸುರೇಶ್ ಬಾಬು ತಿಳಿಸಿದರು.

ಆನೇಕಲ್‌ನ ಸಾಯಿರಾಂ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ನವಭಾರತದ ಶ್ರೇಷ್ಠ ವಿದ್ಯಾರ್ಥಿ-2018 ಲರ್ನಥಾನ್ ಕಾರ್ಯಗಾರದಲ್ಲಿ ದೇಶದ ವಿವಿಧ ರಾಜ್ಯಗಳ 100ಕ್ಕೂ ಹೆಚ್ಚು ಕಾಲೇಜುಗಳ ಸಹಸ್ರಾರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ನಮ್ಮ ಆಲೋಚನೆಗಳನ್ನು ಕ್ರಿಯಾತ್ಮಕವಾಗಿ ಪರಿವರ್ತಿಸಿ ನವೀನತೆಯ ಲೇಪನ ನೀಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸೆಣೆಸುವ ಮೂಲಕ ಅಸ್ತಿತ್ವ ಉಳಿಸಿಕೊಳ್ಳಬೇಕಿದೆ. ಇಂತಹ ಸವಾಲುಗಳನ್ನು ಕ್ರೀಡಾಮನೋಭಾವದಿಂದ ಸ್ವೀಕರಿಸಿ ಜನೋಪಯೋಗಿಯಾಗಿ ಹಾಗೂ ಧನಾತ್ಮಕವಾಗಿ ಪರಿವರ್ತಿಸಬೇಕಾದ ಅವಶ್ಯಕತೆಯಿದೆ ಎಂದರು.

ದೇಶದ ಪ್ರತಿಷ್ಠಿತ ಕಾಲೇಜುಗಳ ಸಹಸ್ರಾರು ವಿದ್ಯಾರ್ಥಿಗಳುಹಾಗೂಸಾಯಿರಾಂಕಾಲೇಜಿನ 104 ವಿದ್ಯಾರ್ಥಿಗಳು ಲರ್ನಥಾನ್‌ನಲ್ಲಿ ಭಾಗವಹಿಸಿದ್ದರು. ಪ್ರಾಂಶುಪಾಲ ಡಾ.ವೈ. ವಿಜಯಕುಮಾರ್, ಉಪ ಪ್ರಾಂಶುಪಾಲ ಡಾ.ಷಡಕ್ಷರಪ್ಪ, ಆಡಳಿತ ಮಂಡಳಿಯ ಡಾ. ಅರುಣ್ ಕುಮಾರ್, ಕೆ.ಪಟೇಲ್, ಅರ್ಪಿತಾ, ನಾಗರಾಜನ್ ವೇದಿಕೆಯಲ್ಲಿದ್ದರು.

Bengaluru
Page No. 4 Feb 04, 2018
Powered by: erelego.com

MJF. LN. LEO MUTHU
Founder Chairman - Sairam Institutions

Sairam INSTITUTIONS